# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ವಾರ್ಡ್ ಸಂಖ್ಯೆ 09/ಸಭೆ/ಪಿಆರ್/ /2021-22

ದಿನಾಂಕ : 18/12/2021

**ಮಾನ್ಯ ಆಯುಕ್ತರು ರವರ ಸುತ್ತೋಲೆ ಸಂಖ್ಯೆ ಬಿ12(5)/ಪಿ.ಆರ್/35/2020-21 ದಿನಾಂಕ 21/09/2020ರ ಆದೇಶದ ಅನ್ವಯ ವಾರ್ಡ್ ನಂ 09 ವಿದ್ಯಾರಣ್ಯಪುರ ವಾರ್ಡ್ ಕಛೇರಿಯಲ್ಲಿ ದಿನಾಂಕ 18/12/2021 ರಂದು ನೋಡೆಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ಕೈಗೊಂಡ ವಾರ್ಡ್ ಸಮಿತಿ ಸಭೆಯ ನಡವಳಿಗಳು**

**ಹಾಜರಿದ್ದ ಅಧಿಕಾರಿ /ನೌಕರರು**

1. ಶ್ರೀ ಶಿವಕುಮಾರ್ ಮುತ್ತುಸ್ವಾಮಿ ಗೌಡರ್, ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು, ವಿದ್ಯಾರಣ್ಯಪುರ ಉಪವಿಭಾಗ
2. ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು & ಕಾರ್ಯದರ್ಶಿ ಹಾಗೂ ಸಂಚಾಲಕರು
3. ಶ್ರೀ ಕೆ.ಎನ್ ಬಾಬು ರೆಡ್ಡಿ, ಕಿರಿಯ ಅಭಿಯಂತರರು(ವಿದ್ಯುತ್)
4. ಡಾ|| ಪುಷ್ಪಲತ, ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ
5. ಶ್ರೀ ಜಿ.ಎಂ ಮಲಯಾದ್ರಿ, ಕೆಲಸ ಪರಿವೀಕ್ಷಕರು, ತೋಟಗಾರಿಕೆ
6. ಶ್ರೀ ಎಸ್.ಶೇಖರ್, ಕೆಲಸ ಪರಿವೀಕ್ಷಕರು, ಅರಣ್ಯ ಇಲಾಖೆ
7. ಶ್ರೀ ಮಂಜುನಾಥ ಹೆಚ್, ಕಿರಿಯ ಅಭಿಯಂತರರು, ಬೆಸ್ಕಾಂ
8. ಶ್ರೀ ಜೋಸೆಫ್ ಹೆನ್ರಿ, ಕೆಲಸ ಪರಿವೀಕ್ಷಕರು, ಬಿಡಬ್ಲ್ಯೂಎಸ್ಎಸ್‌ಬಿ
9. ಶ್ರೀ ಹರೀಶ್ ಜೆ, ತೆರಿಗೆ ಪರಿವೀಕ್ಷಕರು
10. ಶ್ರೀ ನಫೀಸಾ ಎ, ಮೇಲ್ವಿಚಾರಕರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
11. ಶ್ರೀ ಸಿದ್ದರಾಜು, ಕಿರಿಯ ಆರೋಗ್ಯ ಪರಿವೀಕ್ಷಕರು

**ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು**

1. ಬಡಾವಣೆ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು
2. ಸಾರ್ವಜನಿಕರು

**ಶ್ರೀ ಸೋಮಶೇಖರ್ ಜಿ.ಎಲ್, ಸಹಾಯಕ ಅಭಿಯಂತರರು:-** ಸಭೆಗೆ ಹಾಜರಿದ್ದ ಅಧಿಕಾರಿ ಹಾಗೂ ಸದಸ್ಯರನ್ನು ಪರಿಚಯ ಮಾಡಿಕೊಳ್ಳುವುದರ ಮುಖಾಂತರ ಸ್ವಾಗತವನ್ನು ಕೋರಿದರು.

**ನೋಡೆಲ್ ಅಧಿಕಾರಿ** ರವರು ವಾರ್ಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಎಲ್ಲರನ್ನು ಕೋರಿ ಸಭೆಯಲ್ಲಿ ನಡೆಯುವ ನಡವಳಿಗಳನ್ನು ನಮೂದಿಸಲು ತಿಳಿಸಿದರು.

ವಸತಿ ಕ್ಷೇಮಾಭಿವೃದ್ಧಿ **ಸಂಘದ ಸದಸ್ಯರು**

ಎನ್.ಟಿ.ಐ ಬಡಾವಣೆಯಲ್ಲಿ ಹೊಸದಾಗಿ ವಿದ್ಯುತ್ ದೀಪಗಳನ್ನು ಅಳವಡಿಸಲು ಕೋರಿದರು.

ಕ್ರಮ: ಸ.ಕಾ.ಅ, ವಿದ್ಯುತ್

ಡಬಲ್ ರೋಡ್‌ನ ಚರಂಡಿಯಲ್ಲಿ ಹೂಳು ತುಂಬಿರುವುದರಿಂದ ತೆರವುಗೊಳಿಸಲು ಕೋರಿರುತ್ತಾರೆ.

ಕ್ರಮ: ಬೃಹತ್ ರಸ್ತೆಗಳು

ಬೆಸ್ಕಾಂ ವತಿಯಿಂದ ಬೆಸ್ಕಾಂ ಕೇಬಲ್ ಅಳವಡಿಸಲು ಅಗೆದಿರುವ ಗುಂಡಿಗಳನ್ನು ಮುಚ್ಚಿ ರಸ್ತೆಯನ್ನು ಪುನ: ಯಥಾ ಸ್ಥಿತಿಗೆ ತರಲು ಕೋರಿದರು.

ಕ್ರಮ: ಸ.ಕಾ.ಅ. ಬೆಸ್ಕಾಂ

ಬಿ.ಇ.ಎಲ್ ಬಡಾವಣೆಯಲ್ಲಿ ಸಮರ್ಪಕವಾಗಿ ಕುಡಿಯುವ ನೀರಿನ ಪೂರೈಕೆಯಾಗುತ್ತಿರುವುದಿಲ್ಲ, ಡಿಫೆನ್ಸ್ ಬಡಾವಣೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ರಸ್ತೆ ಅಗೆದು ಯಥಾ ಸ್ಥಿತಿಗೆ ತರದೆ ಹಾಗೆಯೇ ಬಿಟ್ಟು ಹೋಗಿರುತ್ತಾರೆ, ಜ್ಞಾನೇಶ್ವರಿ ಬಡಾವಣೆ, ಹೆಚ್.ಎಂ.ಟಿ ಲೇಔಟ್, 5ನೇ ಬ್ಲಾಕ್‌ನಲ್ಲಿ ಹಾಗೂ ಬಿ.ಇ.ಎಲ್ ಬಡಾವಣೆ 6ನೇ ಬ್ಲಾಕ್, 5ನೇ ಮುಖ್ಯ ರಸ್ತೆಯಲ್ಲಿ ಒಳಚರಂಡಿ ನೀರು ಚರಂಡಿಯಲ್ಲಿ ಹರಿಯುತ್ತಿರುವುದಾಗಿ, ಹೆಚ್.ಎಂ.ಟಿ ಲೇಔಟ್ 3ನೇ ಬ್ಲಾಕ್, 10ನೇ ಅಡ್ಡರಸ್ತೆಯಲ್ಲಿ ಮ್ಯಾನ್ ಹೋಲ್ ಕವರ್ ಬದಲಾಯಿಸಲು, ಶಿಥಿಲಾವಸ್ಥೆಯಲ್ಲಿರುವ ಓವರ್‌ಹೆಡ್ ಟ್ಯಾಂಕ್‌ಅನ್ನು ತೆರವುಗೊಳಿಸಲು ಹಾಗೂ ಬಿ.ಇ.ಎಲ್ ಬಡಾವಣೆಯಲ್ಲಿ ಅಳವಡಿಸಿರುವ ಒಳಚರಂಡಿ ಮತ್ತು ಕುಡಿಯುವ ನೀರಿನ ಕೊಳವೆಗಳು ತುಂಬಾ ಹಳೆಯದಾಗಿರುವುದರಿಂದ ನೀರಿನ ಪೂರೈಕೆ ಅಸಮರ್ಪಕವಾಗಿರುವುದರಿಂದ ಕೊಳವೆ ಪೈಪ್‌ಗಳನ್ನು ಬದಲಾಯಿಸಲು ಕೋರಿರುತ್ತಾರೆ.

**ಕ್ರಮ:** ಬಿ.ಡಬ್ಲ್ಯೂ.ಎಸ್.ಎಸ್.ಬಿ ಹಾಜರಿದ್ದ ಕೆಲಸ ಪರಿವೀಕ್ಷಕರು ಕೊಳವೆ ಪೈಪ್‌ಗಳನ್ನು ಬದಲಾಯಿಸಲು ಅನುಮೋದನೆಗಾಗಿ ಕಳುಹಿಸಿದ್ದು, ಅನುಮೋದನೆ ದೊರೆತ ನಂತರ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಹೆಚ್.ಎಂ.ಟಿ ಬಡಾವಣೆ, 2ನೇ ಬ್ಲಾಕ್, 9ನೇ ಮುಖ್ಯ ರಸ್ತೆಯಲ್ಲಿ ಒಣಗಿರುವ ಮರವಿರುವುದರಿಂದ ತೆರವುಗೊಳಿಸಲು ಕೋರಿದರು.

**ಕ್ರಮ: ಉಪವಲಯ ಅರಣ್ಯ ಸಂರಕ್ಷಣಾಧಿಕಾರಿ, ಬ್ಯಾಟರಾಯನಪುರ**

ಹೆಚ್.ಎಂ.ಟಿ ಬಡಾವಣೆ, 3ನೇ ಬ್ಲಾಕ್, 10ನೇ ಅಡ್ಡರಸ್ತೆಯಲ್ಲಿ ಹಾಗೂ ಗುರುದರ್ಶನ್ ಬಡಾವಣೆಯ ಚರಂಡಿಗಳಲ್ಲಿ ಹೂಳು ತುಂಬಿರುವುದರಿಂದ ಮಳೆ ಬಂದಾಗ ನೀರು ಸರಾಗವಾಗಿ ಹರಿಯದೆ ಇರುವುದರಿಂದ ಚರಂಡಿಯಲ್ಲಿ ತುಂಬಿರುವ ಹೂಳು ಮತ್ತು ಘನತ್ಯಾಜ್ಯವನ್ನು ತೆರವುಗೊಳಿಸಲು ಕೋರಿದರು. ಸರ್ ಎಂ.ವಿ ಲೇಔಟ್ ಮತ್ತು ಬಿ.ಇ.ಎಲ್ ಬಡಾವಣೆಗಳ ರಸ್ತೆಗಳಲ್ಲಿ ಜಿಯೋ, ಏರ್‌ಟೆಲ್ ಮತ್ತಿತರ ಕಂಪೆನಿಗಳ ಕೇಬಲ್‌ಗಳನ್ನು ಅಳವಡಿಸಲು ರಸ್ತೆ ಅಗೆದು ಹಾಳು ಮಾಡಿರುವುದರಿಂದ ಸರಿಪಡಿಸಲು, ಹೆಚ್.ಎಂ.ಟಿ ಬಡಾವಣೆಯ ಯೋಗ ಕೇಂದ್ರ ಹಾಗೂ ಲೈಬ್ರರಿ ಬಿಲ್ಡಿಂಗ್‌ನಲ್ಲಿ ವಿದ್ಯುತ್ ಮೀಟರ್ ಅಳವಡಿಸಿ ನೀರಿನ ಸಂಪರ್ಕ ಕಲ್ಪಿಸಲು ಕೋರಿದರು, ಅಂಗನವಾಡಿ ಕೇಂದ್ರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕೋರಿದರು.

**ಕ್ರಮ:** ಸ.ಕಾ.ಅ, ಬಿ.ಉ.ವಿ

ವಿದ್ಯಾರಣ್ಯಪುರ ಮುಖ್ಯ ರಸ್ತೆ ಮತ್ತು ಅಡ್ಡರಸ್ತೆಗಳ ತಿರುವಿನಲ್ಲಿ ತಳ್ಳುವ ಗಾಡಿಗಳನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿರುವುದರಿಂದ ವಾಹನದಲ್ಲಿ ಸಂಚರಿಸುವ ವಾಹನ ಸವಾರರಿಗೆ ತುಂಬಾ ತೊಂದರೆ ಉಂಟಾಗುತ್ತಿರುವುದರಿಂದ ಸದರಿ ಗಾಡಿಗಳನ್ನು ತೆರವುಗೊಳಿಸಲು ಹಾಗೂ ಹೊರ ರಾಷ್ಟ್ರಗಳಿಂದ ಬಂದಂತಹವರ ಬಗ್ಗೆ ಮಾಹಿತಿ ನೀಡಿದಲ್ಲಿ ಅಂತಹವರನ್ನು 7 ದಿವಸಗಳ Quarantine ನಲ್ಲಿ ಇಡುವುದರಿಂದ Omicron ರೋಗ ಹರಡದಂತೆ ಎಚ್ಚರವಹಿಸಬಹುದು ಎಂದು ಡಾ॥ ಪುಷ್ಪಲತ ರವರು ತಿಳಿಸಿದರು.

**ಕ್ರಮ: ಹಿರಿಯ ಆರೋಗ್ಯ ಪರಿವೀಕ್ಷಕರು**

ಡಾ॥ ಪುಷ್ಪಲತ, ಆರೋಗ್ಯಾಧಿಕಾರಿ ರವರು ಪಾಲಿ ಕ್ಲಿನಿಕ್ ತೆರೆಯಲು ಸಹಾಯ ಮಾಡಲು ಬಾಷ ಕಂಪೆನಿಯವರು ಮುಂದೆ ಬಂದಿರುವುದರಿಂದ ವಾರ್ಡ್ ಕಮಿಟಿ ಸದಸ್ಯರುಗಳು ಸಲಹೆಗಳನ್ನು ನೀಡಲು ಕೋರಿದರು.

ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಹ ಮುಂದಿನ ಸಭೆಯಲ್ಲಿ ಆಹ್ವಾನಿಸಲು ಕೋರಿದರು.

ಈ ಮೇಲ್ಕಂಡ ಅಂಶಗಳ ಬಗ್ಗೆ ಸಭೆಯಲ್ಲಿ ಉಪಸ್ಥಿತರಿದ್ದ ಅಧಿಕಾರಿಗಳು ಹಾಗೂ ನೋಡೆಲ್ ಅಧಿಕಾರಿಗಳು ಸದಸ್ಯರೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ 09, ವಿದ್ಯಾರಣ್ಯಪುರ

ನೋಡೆಲ್ ಅಧಿಕಾರಿ ಹಾಗೂ
Assistant Executive Engineer
ಸಹಾಯಕ ಕಾರ್ಯಪಾಲಕ ಅಭಿಯಂತರರು
Vidyaranyapura Sub Division
ವಿದ್ಯಾರಣ್ಯಪುರ ಉಪವಿಭಾಗ
BBMP, Bangalore - 97